**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.302/2022

**PW**. 6

**CW**. 5

**ಸಾಕ್ಷಿಯ ಹೆಸರು –ಚಂದ್ರಶೇಖರ ಕೆ ಪಿ**

**ತಂದೆಯ ಹೆಸರು –ಪುಟ್ಟಸ್ವಾಮಿ**

**ವಯಸ್ಸು –58 ವರ್ಷಗಳು**

ದಿನಾಂಕ 12–11–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ – ಮೈಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಆರೋಪಿತರು , ಚಾಸಾ–1 ಮತ್ತು 2 ರವರು ಗೊತ್ತು. ನಾನು ಪಿರಿಯಾಪಟ್ಟಣ ತಾಲ್ಲೂಕು ಐಲಾಪುರ ಗ್ರಾಮದ ಸರ್ವೇ ನಂ 5/6 ರಲ್ಲಿ 1 ಎಕರೆ 35 ಗುಂಟೆ ಜಮೀನನ್ನು ವೀಶಾಲಾಕ್ಷಿ ಎಂಬುವವರಿಂದ ನನ್ನ ಹೆಂಡತಿಯ ಹೆಸರಿಗೆ 2021 ನೇ ಸಾಲಿನಲ್ಲಿ ಖರೀದಿ ಮಾಡಿದ್ದೇನೆ. ನನಗೆ ಪರಿಚಯಸ್ಥರಾದ ಸಣ್ಣೇಗೌಡ ಎನ್ನುವವರು ಮಧ್ಯಸ್ಥಿಕೆ ವಹಿಸಿ ಜಮೀನು ಕೊಡಿಸಿದ್ದರು. ನನ್ನ ಜಮೀನಿನ ಪಕ್ಕದಲ್ಲಿ ಗ್ರಾಮ ಠಾಣಾ ಇದ್ದು, ವೀಶಾಲಾಕ್ಷಿ ಉಪಯೋಗಿಸುತ್ತಿದ್ದು , ಅನಂತರ ನಾವು ಕೂಡ ಉಪಯೋಗಿಸಿದ್ದೇವು. ನಾವು ನಮ್ಮ ಜಮೀನಿನ ಕೊಂಡು ಕೊಂಡ 3 ತಿಂಗಳ ನಂತರ ಆರೋಪಿತರು ಬೇಲಿ ಹಾಕಲು ಬೆಳಗ್ಗೆ 10.00 ಗಂಟೆಗೆ ಬಂದಿದ್ದರು. ಆನಂತರ ಬೇಲಿ ಹಾಕುವ ವಿಚಾರವಾಗಿ ಆರೋಪಿತರಿಗೂ ಮಹದೇವನಿಗೂ ಗಲಾಟೆ ಆಯಿತು ಎಂದು ಗೊತ್ತಾಯಿತು.

**ಪಾಟೀಸವಾಲುಃ- ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದಃ-**

ಆರೋಪಿತರು ಯಾವುದೇ ಗಲಾಟೆ ಮಾಡದಿದ್ದರೂ ಕೂಡ ಚಾಸಾ-1 ನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.